


International Journal of Kannada Research
www.kannadajournal.com

**ISSN: 2454–5813**
IJKR 2022; 8(1): 75-80
© 2022 IJKR
www.kannadajournal.com/
Received: 01-11-2021
Accepted: 03-12-2021

**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ವಿಭಾಗ
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

Corresponding Author:
**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ವಿಭಾಗ
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

# ಸಿದ್ಧಲಿಂಗಯ್ಯ ಅವರ ಏಕಲವ್ಯ: ಸಮಕಾಲೀನ ಆಶಯಗಳು

## ಡಾ. ಕೆ ಶಿವಾನಂದಯ್ಯ

**ಸಾರಾಂಶ**
ಸಿದ್ಧಲಿಂಗಯ್ಯ ಅವರ 'ಏಕಲವ್ಯ' ನಾಟಕ ಕನ್ನಡದಲ್ಲಿ ಏಕಲವ್ಯ ಪ್ರಸಂಗವನ್ನಾಧರಿಸಿ ಪ್ರಕಟವಾದ ನಾಟಕಗಳಲ್ಲಿ ವಿಶಿಷ್ಟವಾದುದು. ಇದು ಮಹಾಭಾರತದ ಆದಿಪರ್ವದಲ್ಲಿನ ಆಖ್ಯಾನವನ್ನು ಆಧರಿಸಿ ರಚಿತವಾಗಿದೆ. ಪುರಾಣ ಕತೆಯನ್ನು ಸಮಕಾಲೀನ ಸಂದರ್ಭದ ಸಮಸ್ಯೆಗಳಿಗೆ ಕನ್ನಡಿ ಹಿಡಿಯುವ ವಿನೂತನ ಬಗೆಯನ್ನು ಈ ನಾಟಕದಲ್ಲಿ ಕಾಣಬಹುದು. 'ಏಕಲವ್ಯ' ನಾಟಕವು ರಂಗಪ್ರಯೋಗದ ದೃಷ್ಟಿಯಿಂದಲೂ ವಿಶಿಷ್ಟ ಕೃತಿ ಎನಿಸಿದೆ. ಕಾಡು ಮತ್ತು ನಾಡಿನ ಸಂಘರ್ಷದ ಕತೆಯಾಗಿ ಸಿದ್ಧಲಿಂಗಯ್ಯ ಅವರ 'ಏಕಲವ್ಯ' ನಾಟಕ ವಿಶಿಷ್ಟವೆನಿಸಿದೆ. ಸತತ ಪರಿಶ್ರಮ, ಶ್ರದ್ಧೆಯ ಜೊತೆಗೆ ಕಲಿಯಬೇಕೆಂಬ ಛಲದಿಂದ ಮಹತ್ತರವಾದುದನ್ನು ಸಾಧಿಸಬಹುದೆಂಬುದಕ್ಕೆ 'ಏಕಲವ್ಯ' ಆದರ್ಶ ಮಾದರಿ ಎನ್ನಬಹುದು.

**ಪ್ರಮುಖ ಪದಗಳು**: ಕುರುಕ್ಷೇತ್ರ, ಏಕಲವ್ಯ, ಶಬ್ದವೇಧಿ, ಗುರುಕಾಣಿಕೆ

**ಪೀಠಿಕೆ**
ಸಿದ್ಧಲಿಂಗಯ್ಯ ಅವರ 'ಏಕಲವ್ಯ' ನಾಟಕ ಈವರೆಗೆ ಏಕಲವ್ಯ ಪ್ರಸಂಗವನ್ನಾಧರಿಸಿ ಬಂದಿರುವ ನಾಟಕಗಳಲ್ಲಿ ವಿಶಿಷ್ಟವೂ, ಸಮಕಾಲೀನವೂ ಆಗಿದೆ. ಮಹಾಭಾರತದ ಆದಿಪರ್ವದಲ್ಲಿ ಬರುವ ಏಕಲವ್ಯನ ಕಥೆಯನ್ನು ಆಧರಿಸಿ ಈವರೆಗೆ ಎಂ. ಗೋವಿಂದ ಪೈ ಅವರ 'ಹೆಬ್ಬೆರಳು'(1946), ಕುವೆಂಪು ಅವರ 'ಬೆರಳ್ ಗೆ ಕೊರಳ್' (1947), ಕೈಲಾಸಂ ಅವರ 'ಪರ್ಪಸ್' (1956), ಕಾಶೀ ವಿಶ್ವನಾಥಶೆಟ್ಟಿ ಅವರ 'ಏಕಲವ್ಯ' ಪ್ರಕಟಗೊಂಡ ಪ್ರಮುಖ ನಾಟಕಗಳು. ಟಿ.ಪಿ.ಕೈಲಾಸಂ ಅವರ 'ಪರ್ಪಸ್' ನಾಟಕ ಇಂಗ್ಲಿಶ್ ನಲ್ಲಿ ರಚಿತವಾಗಿದ್ದು, ಬಿ.ಎಸ್.ರಾಮರಾವ್ ಅವರು 'ಏಕಲವ್‌ಯ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ.

ಮಹಾಭಾರತದಲ್ಲಿನ ಏಕಲವ್ಯ ಉಪಾಖ್ಯಾನವನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು: ಏಕಲವ್ಯ ಹಿರಣ್ಯಧನು ಬೇಡನ ಸಾಕು ಮಗ. ಬಿಲ್ವಿದ್ಯೆ ಕಲಿಸುವಂತೆ ದ್ರೋಣಾಚಾರ್ಯರನ್ನು ಬೇಡಿಕೊಳ್ಳುತ್ತಾನೆ. ದ್ರೋಣರು ಏಕಲವ್ಯನಿಗೆ ಬಿಲ್ವಿದ್ಯೆ ಕಲಿಸಲು ನಿರಾಕರಿಸುತ್ತಾರೆ. ಏಕಲವ್ಯನು ದ್ರೋಣರ ಮಣ್ಣಿನ ಮೂರ್ತಿಯನ್ನೇ ಗುರುವೆಂದು ಭಾವಿಸಿ ಅಭ್ಯಾಸಮಾಡಿ ಮಹಾಬಿಲ್ಲುಗಾರನಾಗುತ್ತಾನೆ. ಶಬ್ದವೇಧಿ ವಿದ್ಯೆಯನ್ನು ಕರಗತಮಾಡಿಕೊಳ್ಳುತ್ತಾನೆ. ಒಮ್ಮೆ ಕುರು-ಪಾಂಡವರು ಬೇಟೆಗೆ ಹೋಗಿದ್ದಾಗ ಅವರ ಬೇಟೆಯ ನಾಯಿ ಏಕಲವ್ಯನನ್ನು ಕಂಡು ಬೊಗಳುತ್ತದೆ. ಆಗ ಏಕಲವ್ಯ ಪ್ರಯೋಗಿಸಿದ ಏಳು ಬಾಣಗಳು ನಾಯಿಯ ಬಾಯಿಯನ್ನು ಮುಚ್ಚುತ್ತದೆ. ಕುರು-ಪಾಂಡವರಿಗೆ ಏಕಲವ್ಯನು ಬಿಲ್ವಿದ್ಯೆಯಲ್ಲಿ ಪರಾಕ್ರಮಿ ಎಂಬುದು ಗೊತ್ತಾಗುತ್ತದೆ. ಅರ್ಜುನ ಏಕಲವ್ಯನ ಬಗ್ಗೆ ಅಸಹನೆ ತಾಳುತ್ತಾನೆ. ಅರ್ಜುನ ದ್ರೋಣಾಚಾರ್ಯರಿಗೆ ಬಿಲ್ವಿದ್ಯೆಯಲ್ಲಿ ನಿನ್ನನ್ನು ಯಾರೂ ಮೀರಿಸಲಾರರು ಎಂದು ವಚನಕೊಟ್ಟಿದ್ದೀರಿ. ಆದರೆ ನನ್ನನ್ನೂ ಮೀರಿಸುವ

ವೀರನಿದ್ದಾನೆ ಎಂದ ಕೊಟ್ಟ ವಚನ ತಪ್ಪಿದ್ದೀರಿ ಎಂದು ಪ್ರಶ್ನಿಸುತ್ತಾನೆ. ಮೇಲೆ ನೀವು ನನಗೆ
ಆಗ ದ್ರೋಣಾಚಾರ್ಯರು ಏಕಲವ್ಯನ ವೃತ್ತಾಂತವನ್ನು ತಿಳಿದು ಗುರುದಕ್ಷಿಣೆಯಾಗಿ ಬಲಗೈ ಹೆಬ್ಬೆರಳನ್ನು ತೆಗೆದುಕೊಳ್ಳುತ್ತಾರೆ.

**ಕಥಾವಸ್ತು**

ಪುರಾಣದ ಕಥೆಯನ್ನು ಲೇಖಕ ತನ್ನ ಧೋರಣೆ ಮತ್ತು ವೈಚಾರಿಕ ನಿಲುವುಗಳಿಗೆ ಅನುಗುಣವಾಗಿ ಮಾರ್ಪಾಡು ಮಾಡಿಕೊಳ್ಳುವ ಪರಂಪರೆಯನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾಣುತ್ತೇವೆ. ಅದರಂತೆ ಸಿದ್ದಲಿಂಗಯ್ಯ ಅವರು ಮಹಾಭಾರತದ ಏಕಲವ್ಯ ಉಪಾಖ್ಯಾನವನ್ನು ಸಮಕಾಲೀನ ಸಂದರ್ಭದಲ್ಲಿ ಪುನರ್ ವ್ಯಾಖ್ಯಾನ ಮಾಡುವ ಪ್ರಯತ್ನ ಮಾಡಿದ್ದಾರೆ. ಸಿದ್ದಲಿಂಗಯ್ಯ ಅವರ 'ಏಕಲವ್ಯ' ನಾಟಕ ವಸ್ತುವನ್ನು ಆರಂಭದಲ್ಲಿ ಬರುವ ಹಾಡಿನಲ್ಲೇ ಗುರುತಿಸಬಹುದು.

> ನಾಡಿಗೆ ಹೋರಾಡಿ ಪ್ರಾಣವ ಕೊಟ್ಟಂಥ
> ವೀರರ ಕಥೆಯು ಅನವರತ
> ಕಾಡಿಗೆ ಹೋರಾಡಿ ಕಣ್ಣಾದ ವೀರನ
> ಕಥೆಯಿದು ಆಗಲಿ ಜನಜನಿತ
> ಹಾಸ್ಯದ ಹೊನಲಲ್ಲ ಶೃಂಗಾರ ಮಡುವಲ್ಲ
> ಸಂಘರ್ಷದಾ ಕಥೆ ಬಂಧುಗಳೆ
> ಅಡವಿಯ ಬಾಲನು ಘನ ಏಕಲವ್ಯನು
> ಹೋರಾಟ ಮಾಡಿದ ಕಥೆಯ ಕೇಳಿ[1]

**ಕಾಡಿಗಾಗಿ ಹೋರಾಡಿದ ವೀರ ಏಕಲವ್ಯನ ಕತೆ ಜನಜನಿತವಾಗಲಿ ಎಂಬ ಆಶಯವಿದೆ**.

'ಏಕಲವ್ಯ' ನಾಟಕದಲ್ಲಿ ಹನ್ನೊಂದು ದೃಶ್ಯಗಳಿವೆ. ಮೊದಲ 'ದೃಶ್ಯ' ಕುರುಕ್ಷೇತ್ರ ಯುದ್ಧ ದೃಶ್ಯದೊಂದಿಗೆ ಆರಂಭವಾಗಿ ವ್ಯಾಪಾರಿಯೊಂದಿಗೆ ಸೇರಿಕೊಂಡಿರುವ ಸೈನಿಕ ಕಾಡಿನ ಮರಕಡಿಯುವುದು ಪ್ರಮುಖ ವಿಚಾರ. ದೃಶ್ಯದ ಆರಂಭದಲ್ಲೇ ಕುರುಕ್ಷೇತ್ರ ಯುದ್ಧ ನಡೆಯುತ್ತಿದೆ. ಕಾಡನ್ನು ನಾಶಗೊಳಿಸುತ್ತಿರುವ ಪಟ್ಟಣದ ನಾಗರಿಕರನ್ನು ಕಾಡಿನ ಮಕ್ಕಳಾದ ಬೋರಣ್ಣ, ಗಾಳಣ್ಣರು ಪ್ರಶ್ನಿಸುತ್ತಾರೆ. ಪಟ್ಟಣದ ನಾಗರಿಕರನ್ನು ಪ್ರತಿನಿಧಿಸುವ ವ್ಯಾಪಾರಿ ಶೆಟ್ಟಿ ಮತ್ತು ಸೈನಿಕನೊಂದಿಗೆ ಕಾಡಿನ ಜನರು ನಡೆಸುವ ವಾಗ್ವಾದವು ಸ್ಪಷ್ಟವಾಗಿ ಕಾಡು-ನಾಡಿನ ನಡುವೆ ಉಂಟಾದ ಸಂಘರ್ಷವನ್ನು ಸೂಚಿಸುತ್ತದೆ. ಪ್ರಭುತ್ವವೂ ಸೇರಿದಂತೆ ನಾಗರಿಕರು ಕಾಡನ್ನು ನಾಶ ಮಾಡುತ್ತಿದ್ದಾರೆ. ಕಾಡಿನ ಮಕ್ಕಳು ಕಾಡಿನ ರಕ್ಷಣೆಗಾಗಿ ನಿಲ್ಲುತ್ತಾರೆ. ಈ ಕಾರಣಕ್ಕಾಗಿಯೇ 'ಏಕಲವ್ಯ' ಪ್ರಸಂಗವನ್ನು ಆಧರಿಸಿ ಇದುವರೆಗೆ ರಚಿತವಾದ ನಾಟಕಗಳಿಗಿಂತ ಸಿದ್ದಲಿಂಗಯ್ಯ ಅವರ 'ಏಕಲವ್ಯ' ಭಿನ್ನವಾಗಿದೆ. ಕಾಡಿನ ಮಕ್ಕಳು ಕಾಡಿನ ವೀರ ಏಕಲವ್ಯನ ಹೆಸರು ಪ್ರಸ್ತಾಪಿಸುತ್ತಿದ್ದಂತೆ ಮೇಳದವರು ಏಕಲವ್ಯನ ಪರಾಕ್ರಮವನ್ನು ಕೊಂಡಾಡುತ್ತಾರೆ:

> ಏಕಲವ್ಯ ಏನು ಮಾಡಿದ?
> ಸೊಕ್ಕಿದವರ ಸುಟ್ಟು ಹಾಕಿದ
> ಮುದಿಯ ಹಕ್ಕಿ ಮರಿಯ ಮಾಡಿ ಸತ್ತು ಹೋದಾಗ
> ಮರಿಗಳನ್ನು ಮಕ್ಕಳಂತೆ ಸಾಕಿ ಸಲಹಿದ
> ಏಕಲವ್ಯನ ತಿಂತೀನಂತ ಸಿಂಹ ಬಂದಾಗ
> ಸಿಂಹದ ಮೇಲೆ ಕುಂತು ಅವನು ಸವಾರಿ ಮಾಡಿದ
> ಹುಲಿಯು ಏಕಲವ್ಯನ ಮೇಲೆ ಹಾರಿ ಬಿದ್ದಾಗ
> ಹಗ್ಗ ಹಾಕಿ ಅದನು ಮನೆಯ ನಾಯಿ ಮಾಡಿದ
> ಪಟ್ಟಣದಿಂದ ದುಷ್ಟನೊಬ್ಬ ಇಲ್ಲಿಗೆ ಬಂದಾಗ
> ಏಕಲವ್‌ಯ ಅವನ ಹಿಡಿದು ಮಟ್ಟ ಹಾಕಿದ[2]

ಕಾಡಿನ ರಕ್ಷಣೆಗಾಗಿ ಇನ್ನಷ್ಟು ವಿದ್ಯೆ ಕಲಿಯಬೇಕೆಂಬ ಹಂಬಲ ಏಕಲವ್ಯನದ್ದು. ಆದರೆ ರಾಜರುಗಳು ತಮ್ಮ ಅಹಂ ಮತ್ತು ದ್ವೇಷಕಾರಣಕ್ಕಾಗಿ ಯುದ್ಧಗಳನ್ನು ಕೈಗೊಳ್ಳುತ್ತಾರೆ. ಕುರುಕ್ಷೇತ್ರ ಯುದ್ಧ ಪ್ರಸಂಗವನ್ನು ಹಾಡಿನ ಮೂಲಕ ವಿಡಂಬಿಸಲಾಗಿದೆ. ಜೊತೆಗೆ ಹೆಣ್ಣು, ಜೂಜು, ಯುದ್ಧಗಳಲ್ಲಿ ಮುಳುಗಿ ಹೋಗಿರುವ ರಾಜರುಗಳ ಮನಸ್ಸಿನಲ್ಲಿ ಬೇರೂರಿರುವ ವೈರತ್ವವನ್ನು ನಿರೂಪಿಸಿದೆ. ಅಣ್ಣ ತಮ್ಮನನ್ನು, ಮಗ ಅಪ್ಪನನ್ನು ಕೊಲ್ಲುತ್ತಾನೆ. ಗುರು-ಶಿಷ್ಯನ ಕೈಯಲ್ಲಿ ಪ್ರಾಣ ಬಿಡುತ್ತಾನೆ. ದ್ವೇಷ ಮೂಲವಾದ ಯುದ್ಧದ ಕೇಡುಗಳನ್ನು ಪ್ರಸ್ತಾಪಿಸಿದೆ. ಮೊದಲನೆಯ ದೃಶ್ಯದಲ್ಲೇ ಕುರುಕ್ಷೇತ್ರ ಯುದ್ಧದ ಭೀಕರ ಅನಾಹುತ, ಪ್ರಭುತ್ವದ ಯುದ್ಧ ಲಾಲಸೆಯ ಚಿತ್ರಣದ ಹಿನ್ನೆಲೆಯೊಂದಿಗೆ ಕಾಡಿನ ಮಕ್ಕಳು ಮರ ಕಡಿಯಲೆಂದು ಬಂದ ಪಟ್ಟಣಿಗರನ್ನು ಓಡಿಸಿ, ಸಂಭ್ರಮಿಸುತ್ತಾರೆ. ಆದರೆ ನಗುತ್ತ ನಿಂತಿದ್ದ ಬೇಡರ ಗುಂಪನ್ನು ಕುಣಿಯುತ್ತಾ ರಂಗಪ್ರವೇಶಿಸಿದ ಸೈನಿಕರು ಸುತ್ತುವರಿದು ಹೊಡೆದು ಬಡಿಯುವ ಕ್ರಿಯೆಯ ಮೂಲಕ ನಾಟಕಕಾರ ನಾಡಿನ ಆಕ್ರಮಣದಿಂದ ಕಾಡು ತತ್ತರಿಸುತ್ತದೆಂಬುದನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ.

ಪ್ರಭುತ್ವದ ಪ್ರತಿನಿಧಿಯಾಗಿರುವ ಮಹಾರಾಜನ ಪಾತ್ರ ನಾಟಕದಲ್ಲಿ ನೇರವಾಗಿ ಕಾಣಿಸಿಕೊಳ್ಳುವುದಿಲ್ಲ. ಚಂದನಶೆಟ್ಟಿ, ಸೈನಿಕ ಹಾಗು ಕಾಡಿನ ಜನರೊಂದಿಗೆ ಮಾತನಾಡುವಾಗ ಮಹಾರಾಜ ವನವಿಹಾರಕ್ಕೆಂದು ಕಾಡಿಗೆ ಬಂದದ್ದನ್ನು ಪ್ರಸ್ತಾಪಿಸಿದೆ. ಮಹಾರಾಜ ತನ್ನ ರಾಣಿಯರೊಡನೆ ಮೋಜುಮಾಡಲೆಂದು ಕಾಡಿಗೆ ಬಂದದ್ದನ್ನು, ಕಾಡಿನ ಜಿಂಕೆ, ಮೊಲಗಳ ಪ್ರಾಣವೆಂದರೆ ಅವನಿಗೆ ಪ್ರಿಯವೆಂತಲು, ಒಮ್ಮೆ ಹುಲಿಯ ಕೈಗೆ ಸಿಕ್ಕಿ ತನ್ನ ರಾಣಿಯರನ್ನೆಲ್ಲಾ ಬಿಟ್ಟು ಜೀವಭಯದಿಂದ ಓಡಿ ಹೋದುದನ್ನು ಕಾಡಿನ ಮರಗಳನ್ನು ಕಡಿಯಲು ವ್ಯಾಪಾರಿ ಚಂದನಶೆಟ್ಟಿಗೆ ಅನುಮತಿ ನೀಡಿದ್ದಲ್ಲದೆ ಅವನೊಟ್ಟಿಗೆ ಸೈನಿಕನನ್ನು ಕಳುಹಿಸಿರುವುದು ಸಂಭಾಷಣೆಯ ಮೂಲಕ ತಿಳಿಯುತ್ತದೆ. ಇದು ಭ್ರಷ್ಟ ಆಡಳಿತ ವ್ಯವಸ್ಥೆಯನ್ನು ಸಂಕೇತಿಸುತ್ತದೆ. ಕಾಡನ್ನು ರಕ್ಷಿಸಬೇಕಾದ ಆಡಳಿತ ವ್ಯವಸ್ಥೆಯೇ ವಿನಾಶಮಾಡಲು ಸಹಕರಿಸುತ್ತಿರುವುದು ಸಮಕಾಲೀನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಎರಡನೆಯ 'ದೃಶ್ಯ'ವು ಪಟ್ಟಣದ ಪುಂಡರು ಕಾಡಿಗೆ ಬೆಂಕಿ ಹಚ್ಚಿರುವುದು ಕಾಡಿಗೆ ಆದ ಅವಮಾನ ಎಂದು ಏಕಲವ್ಯ ಆತಂಕಕ್ಕೊಳಗಾಗುವುದರೊಂದಿಗೆ ಪ್ರಾರಂಭವಾಗುತ್ತದೆ. ಕಾಡು-ನಾಡಿನ ಸಂಘರ್ಷ ಮುಂದುವರಿದಿದೆ. ಏಕಲವ್ಯನಿಗೆ ತನ್ನ ಶಕ್ತಿ ಸಾಮರ್ಥ್ಯದ ಮಿತಿಯ ಅರಿವಾಗಿದೆ. 'ನನ್ನ ಶಕ್ತಿ ಸಾಮರ್ಥ್ಯದ ಅರಿವು ಬರೀ ಭ್ರಮೆಯೆ? ನನ್ನ ಬಿಲ್ಲು, ನಾನೇ ಮಾಡಿದ ಬಾಣಗಳು ನನ್ನನ್ನೇ ಮೋಸಗೊಳಿಸುತ್ತವೆಯೋ ಹೇಗೆ? ಅಪ್ಪನ ಕಾಲದ ಬಿಲ್ಲಿಗೆ ಮಗನ ಕಾಲಕ್ಕೆ ಮುಪ್ಪೊದಗಿತೇ?'[3] ಎಂದು ಯೋಚಿಸುತ್ತಿರುವಾಗ

ಏಕಲವ್ಯನ ತಾಯಿ 'ನೀನಿನ್ನು ಹುಡುಗ. ಸಾಧಿಸಬೇಕಾದ್ದು ಬಾಳ ಅದೆ. ನೀನೊಬ್ಬ ದೊಡ್ಡ ಬಿಲ್ಲುಗಾರನಾಗಬೇಕು'[4] ಎಂದು ಸಮಾಧಾನಪಡಿಸುತ್ತಾ ದ್ರೋಣಾಚಾರ್ಯರ ಬಳಿ ಬಿಲ್ಲು ವಿದ್ಯೆ ಕಲಿಯಲು ಹೊರಡು ಎಂದು ಹೇಳುತ್ತಾಳೆ. ಅಲ್ಲದೆ ಪಟ್ಟಣಿಗರನ್ನು ಮಣಿಸಲು ಅವರ ಪಟ್ಟುಗಳನ್ನು ಕಲಿಯಬೇಕಾದುದು ಅನಿವಾರ್ಯ ಎನ್ನುತ್ತಾಳೆ.

ಮೂರನೆಯ 'ದೃಶ್ಯ'ದಲ್ಲಿ ಏಕಲವ್ಯನು ಕುರು-ಪಾಂಡವರಿಗೆ ದ್ರೋಣರು ಬಿಲ್ವಿದ್ಯೆ ಕಲಿಸುವ ಸ್ಥಳಕ್ಕೆ ಬಂದು ಬಿಲ್ವಿದ್ಯೆ ಕಲಿಸುವಂತೆ ಕೇಳಿಕೊಳ್ಳುವುದನ್ನು ಕಾಣಬಹುದು. ದುರ್ಯೋಧನ ಏಕಲವ್ಯನಲ್ಲಿ ಹುಟ್ಟಿದ ಕಲಿಯಬೇಕೆಂಬ ಆಸೆ, ಹಂಬಲಕ್ಕೆ ಅಚ್ಚರಿಪಡುತ್ತಾನೆ. ದ್ರೋಣಾಚಾರ್ಯರು ನಿನಗೆ ವಿದ್ಯೆ ಕಲಿಸಲು ಶಾಸ್ತ್ರ ಸಮ್ಮತವಿಲ್ಲ ಎಂದು ಹೇಳಿದ್ದಲ್ಲದೆ, ಅಸಮಾನತೆ ಎಂಬುದು ನಿಸರ್ಗದಷ್ಟೇ ಸಹಜ. ಪಾಪ-ಪುಣ್ಯಗಳಿಗನುಗುಣವಾಗಿ ಮನುಷ್ಯ ಮೇಲು ಕೀಳು ಜಾತಿಗಳಲ್ಲಿ ಹುಟ್ಟುತ್ತಾನೆ ಎಂದು ಹೇಳುತ್ತಾರೆ. ಏಕಲವ್ಯ ತನ್ನ ಹುಟ್ಟಿಗೆ ಕಲಿಯಬೇಕೆಂಬ ಹಂಬಲಕ್ಕೆ, ಜ್ಞಾನದಾಹಕ್ಕೆ ಧಿಕ್ಕಾರವಿರಲೆಂದು ಹೇಳಿ ನಿರ್ಗಮಿಸುತ್ತಾನೆ. 'ಈ ಜನ್ಮದಲ್ಲಿ ನನ್ನನ್ನು ಅಪಮಾನಕ್ಕೆ ಈಡುಮಾಡಿದ ಹಿಂದಣ ಜನ್ಮದ ನನ್ನ ಪಾಪ ಪರಂಪರೆಗೆ ಧಿಕ್ಕಾರವಿರಲಿ. ಹೆಚ್ಚು ಕಲಿಯಬೇಕೆಂಬ ಆಸೆಯ ಕಿಡಿಯನ್ನು ನನ್ನ ಎದೆಯಲ್ಲಿ ಹೊತ್ತಿಸಿದ ನನ್ನ ಜ್ಞಾನದಾಹಕ್ಕೆ ಧಿಕ್ಕಾರವಿರಲಿ'[5] ಎನ್ನುತ್ತಾ ನಿರ್ಗಮಿಸುತ್ತಾನೆ.

ನಾಲ್ಕನೆಯ 'ದೃಶ್ಯ'ದಲ್ಲಿ ಬಿಲ್ವಿದ್ಯೆ ಕಲಿಸಲು ದ್ರೋಣರು ನಿರಾಕರಿಸಿದ್ದರಿಂದ ದುಃಖಿತನಾದ ಏಕಲವ್ಯನಿಗೆ ಅಶ್ವತ್ಥಾಮ ಸಮಾಧಾನಪಡಿಸುವುದು ಪ್ರಮುಖ ಸಂಗತಿ. 'ಅಸಹಾಯಕತೆಯೇ ಜಗತ್ತನ್ನೂ ನಮ್ಮ ಬದುಕಿನ ಗತಿಯನ್ನೂ ನಿರ್ಧರಿಸೋ ಪ್ರಬಲ ಶಕ್ತಿ'[6] ಎಂದು ಅಶ್ವತ್ಥಾಮ ಏಕಲವ್ಯನ ಸ್ನೇಹಾಕಾಂಕ್ಷಿಯಾಗಿ ಬರುತ್ತಾನೆ. 'ಮನಸ್ಸಿದ್ದಲ್ಲಿ ಮಾರ್ಗ' ಎಂಬಂತೆ ಅಶ್ವತ್ಥಾಮ ಉಪಾಯವೊಂದನ್ನು ಹೇಳುತ್ತಾನೆ. ಅದೇನೆಂದರೆ ದ್ರೋಣರು ತನಗೆ ಬಿಲ್ವಿದ್ಯೆ ಕಲಿಸುವಾಗ ಮರದ ಮರೆಯಲ್ಲಿ ನಿಂತು ನೋಡುತ್ತಾ ಕಲಿ ಎಂದು ಹೇಳುತ್ತಾನೆ. ಅದರಂತೆ ಮರೆಯಲ್ಲಿ ನಿಂತು ನೋಡುತ್ತಾ ಅಭ್ಯಾಸ ಮಾಡುತ್ತಿದ್ದ ಏಕಲವ್ಯನನ್ನು ನೋಡಿದ ದ್ರೋಣಾಚಾರ್ಯರು ಇದು ನಿನಗೂ ಯೋಗ್ಯವಲ್ಲ, ನನಗೂ ಕ್ಷೇಮವಲ್ಲ ಹೊರಟು ಹೋಗು ಎನ್ನುತ್ತಾರೆ. ಆದರೆ ಬಿಲ್ವಿದ್ಯೆ ಬಗ್ಗೆ ನಿನಗಿರುವ ಪ್ರಾಮಾಣಿಕ ಆಸಕ್ತಿಯನ್ನು ಕಂಡು ಮನಸ್ಸು ಸಂಕಟಪಡುತ್ತಿದೆ. ಶಿಷ್ಯನ ಶ್ರದ್ಧೆಗೆ ಯಾವ ಗುರು ತಾನೇ ಸ್ಪಂದಿಸುವುದಿಲ್ಲ. ಆದರೆ ನಾನು ಅಸಹಾಯಕ ಎನ್ನುತ್ತಾನೆ. ಆಗ ಏಕಲವ್ಯ ನಿಮಗೆ ಕಲಿಸಬೇಕೆಂಬ ಮನಸ್ಸಿದೆಯಲ್ಲಾ ಅಷ್ಟೇ ಸಾಕು ಆಶೀರ್ವದಿಸಿ ಎಂದು ಹೇಳಿ ಕಾಡಿಗೆ ತೆರಳುತ್ತಾನೆ. 'ಬಿಲ್ಲು ವಿದ್ಯೆ ರಾಜಕುಮಾರರಿಗೆ ಬಾಹುಬಲದ ಪ್ರದರ್ಶನಕ್ಕಾಗಿ ನಿನ್ನಂಥವರಿಗೆ ಅದು ಲೋಕ ಕಲ್ಯಾಣದ ಸಾಧನ'[7] ಎಂಬ ಅಶ್ವತ್ಥಾಮನ ಮಾತುಗಳು ವಿದ್ಯೆಯನ್ನು ಕುರಿತ ಮಹತ್ವದ ಒಳನೋಟವನ್ನು ನೀಡುತ್ತದೆ.

ಐದನೆಯ 'ದೃಶ್ಯ' ದಲ್ಲಿ ಭೀಷ್ಮ-ದ್ರೋಣರ ಮುಖಾಮುಖಿಯಾಗುವ ಸನ್ನಿವೇಶವನ್ನು ಕಾಣಬಹುದು. ದ್ರೋಣರಿಗೆ ತಾವು ಕಲಿಸುತ್ತಿರುವ ವಿದ್ಯೆಯಿಂದ ಅನಾಹುತಗಳು ಸಂಭವಿಸುತ್ತವೆ ಎಂಬ ಅಪರಾಧಿಪ್ರಜ್ಞೆ ಆವರಿಸಿದೆ. ವಿದ್ಯೆ ಕಲಿತ ಸೋದರರು ಪರಸ್ಪರ ಕಾದಾಡುತ್ತಾರೆ ಎಂದೆನಿಸಿದೆ. ದ್ರೋಣರ ಮನೋಇಂಗಿತವನ್ನು ಬಲ್ಲ ಭೀಷ್ಮರು 'ಮಾನವೀಯತೆ, ಹೃದಯವಂತಿಕೆಗಳು ರಾಜಾಶ್ರಯದಲ್ಲಿ ಅರಳುವ ಬದಲು ನರಳುತ್ತವೆ' ನಿಜ ಆದರೆ 'ಲೋಕ ಕಲ್ಯಾಣಕ್ಕೆ ಅನಿವಾರ್ಯವಾದ ದುರಂತವೊಂದರ ಸಂಭವಕ್ಕಾಗಿ ನಾವೆಲ್ಲಾ ದುಡಿಯಬೇಕು' ಎಂದು ಸಮಾಧಾನ ಹೇಳುತ್ತಾರೆ. ಕ್ಷತ್ರಿಯರ ಬಾಹುಬಲಕ್ಕೆ ಬ್ರಾಹ್ಮಣರ ಬುದ್ದಿಯ ಬಲ ಅಗತ್ಯ. ಬ್ರಾಹ್ಮಣರು ಲೋಕದ ಎಲ್ಲ ಜೀವಿಗಳ ಆತ್ಮಗಳ ಅಧಿಕೃತ ಒಡೆಯರು ಎಂದು ಪುರೋಹಿತಶಾಹಿಗಳ ಪಾರಮ್ಯವನ್ನು ಕೊಂಡಾಡುತ್ತಾರೆ.

ಆರನೆಯ 'ದೃಶ್ಯ'ದಲ್ಲಿ ದ್ರೋಣರ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಬಿಲ್ವಿದ್ಯೆಯನ್ನು ಅಭ್ಯಾಸ ಮಾಡುವುದನ್ನು ಕಾಣಬಹುದು. ಇದೊಂದು ಪುಟ್ಟ ಕ್ರಿಯಾದೃಶ್ಯ. 'ಮಾನಾಭಿಮಾನ ನಿನ್ನದು ನನ್ನನ್ನು ಉದ್ಧರಿಸು' ಎಂಬ ಹಾಡು ದೃಶ್ಯದ ಕ್ರಿಯೆಯನ್ನು ಪರಿಣಾಮಕಾರಿಯಾಗಿ ಧ್ವನಿಸುತ್ತದೆ.

ಏಳನೆಯ 'ದೃಶ್ಯ' ದ್ರೋಣ ಅರ್ಜುನ ಏಕಲವ್ಯರು ಕಾಡಿನಲ್ಲಿ ಮುಖಾಮುಖಿಯಾಗುವುದನ್ನು ಕಾಣಬಹುದು. ಅಗೋಚರವಾದ ಬಾಣ ಬೇಟೆಯ ನಾಯಿಯ ಬಾಯಿ ಮುಚ್ಚಿಸಿದ್ದನ್ನು ಕಂಡು ಅರ್ಜುನ ವಿಸ್ಮಯಗೊಳ್ಳುತ್ತಾನೆ. ದ್ರೋಣಾಚಾರ್ಯರು ಧ್ವನಿಯನ್ನು ಗ್ರಹಿಸಿಯೇ ಬಾಣ ಪ್ರಯೋಗಿಸುವುದು ಶಬ್ದವೇಧಿ. ಈ ವಿದ್ಯೆಯನ್ನು ಬಲ್ಲವನು ಕಾಡಿನಲ್ಲಿರುವುದು ಸೋಜಿಗವೆನ್ನುತ್ತಾರೆ. ಏಕಲವ್ಯನನ್ನು ಕಂಡು ನಿನ್ನ ಗುರುಗಳು ಯಾರು? ಈ ವಿದ್ಯೆಯನ್ನು ಕಲಿತದ್ದು ಹೇಗೆ? ಎಂದು ಕೇಳಿದಾಗ ಏಕಲವ್ಯನು ತಾವೇ ನನ್ನ ವಿದ್ಯಾಗುರುಗಳು ಎನ್ನುತ್ತಾನೆ. ದ್ರೋಣಾಚಾರ್ಯರು ಹರ್ಷ ವ್ಯಕ್ತಪಡಿಸಿದರೆ ಅರ್ಜುನ ಅಸಹನೆ ಪಡುತ್ತಾನೆ. 'ಜಗತ್ತಿನಲ್ಲೇ ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡುತ್ತೇನೆಂದು ನನಗೆ ವಚನ ಕೊಟ್ಟು ಭಂಗಪಡಿಸಿದ್ದೀರೆಂದು ಸಿಡಿಮಿಡಿಗೊಳ್ಳುತ್ತಾನೆ. ಅದಕ್ಕೆ ದ್ರೋಣರು ಸತ್ಯವನ್ನು ಒಪ್ಪಿಕೊಳ್ಳಲು ಸಂಕೋಚವೇಕೆ? ಏಕಲವ್ಯ ಮಹಾನ್ ಪರಾಕ್ರಮಿ, ಶಬ್ದವೇಧಿ ವಿದ್ಯೆ ಅವನಿಗಲ್ಲದೆ ಮತ್ತಾರಿಗೂ ಸಿದ್ಧಿಸಿಲ್ಲ' ಎನ್ನುತ್ತಾರೆ. ದ್ರೋಣರ ಮಾತನ್ನು ಒಪ್ಪದ ಅರ್ಜುನ 'ಅರಸು ಕುಲದ ನಾನೆಲ್ಲಿ, ಕೀಳು ಕುಲದ ಈ ಕುನ್ನಿಯೆಲ್ಲಿ? ಎಂದು ಕುದಿಯತೊಡಗುತ್ತಾನೆ. ದ್ರೋಣರು ವಿದ್ಯೆಗೆ ಅಂತಸ್ತಿನ ಅಂತರವಿಲ್ಲ. ಕಷ್ಟಪಟ್ಟು ಕಲಿತವರಿಗೆ ಅದು ಒಲಿಯುತ್ತದೆ ಎಂಬುದು ಈಗ ದೃಢಪಟ್ಟಿದೆ'[8] ಎಂದು ಹೇಳುತ್ತಾರೆ. ಮತ್ತಷ್ಟು ವ್ಯಗ್ರನಾದ ಅರ್ಜುನನು ದ್ರೋಣಾಚಾರ್ಯರನ್ನು ವಚನಭ್ರಷ್ಟರೆಂದು ಹಂಗಿಸುತ್ತಾನೆ. ದ್ರೋಣರು ಸಂಕಷ್ಟಕ್ಕೆ ಸಿಲುಕುತ್ತಾರೆ. ಮಾತಿಗೆ ತಪ್ಪಿದ ಪಾಪಿ ಎಂದು ಪರಿತಪಿಸುತ್ತಾರೆ. ಗುರುಗಳ ಸಂಕಟಕ್ಕೆ ಏಕಲವ್ಯ ಮಿಡಿಯುತ್ತಾನೆ. ಗುರುಗಳ ಗೌರವ ಕಾಯಲು ಬದ್ದನಾಗುತ್ತಾನೆ. ಗುರುಕಾಣಿಕೆ ಅರ್ಪಿಸಲು ಸಿದ್ದನಾಗುತ್ತಾನೆ. ದ್ರೋಣರು ಏಕಲವ್ಯನ ಬಲಗೈ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ಕೇಳುತ್ತಾರೆ. ಏಕಲವ್ಯನು ಬಿಲ್ವಿದ್ಯೆ ಕಲಿಯಲೆಂದು ದ್ರೋಣರ ಬಳಿ ಬಂದಾಗ ಬೇಡನಾದವನು ಏನು ಗುರುಕಾಣಿಕೆ ಕೊಡಬಲ್ಲನೆಂದು ಹಂಗಿಸಿದ್ದನ್ನು

ನೆನಪಿಸುತ್ತಾ ಇದೋ ಗುರುಬಯಸಿದ ಕಾಣಿಕೆಯನ್ನು ಕೊಡುತ್ತಿದ್ದೇನೆ ಎಂದು ಹೆಬ್ಬಂಡೆಯ ಮೇಲೆ ಹೆಬ್ಬೆರಳನ್ನು ಕತ್ತರಿಸಿ ಗುರುಕಾಣಿಕೆಯಾಗಿ ಅರ್ಪಿಸುತ್ತಾನೆ. ಗುರುಕಾಣಿಕೆಯಾಗಿ ತನ್ನ ಹೆಬ್ಬೆರಳನ್ನು ಕೊಟ್ಟ ಮಗ ಏಕಲವ್ಯನನ್ನು ಕಂಡು ತಾಯಿ ಮಮ್ಮಲ ಮರುಗುತ್ತಾಳೆ. 'ಅವನು ಗುರುವಲ್ಲ, ಕೊಲೆಗಡುಕ', 'ನಿನ್ನ ಗುರುವಿನ ಬಾಳು ಹಾಳಾಗಲಿ'[9] ಎಂದು ಶಪಿಸುತ್ತಾಳೆ. ಏಕಲವ್ಯ ಏನನ್ನೋ ನಿರ್ಧರಿಸಿದವನಂತೆ ಬಿಲ್ಲನ್ನು ಬಲಗೈಗೆ ಹಸ್ತಾಂತರಿಸಿ, ಎಡಗೈಯಲ್ಲಿ ಬಾಣ ಹಿಡಿದು ನಿಲ್ಲುತ್ತಾನೆ. ಕುಣಿಯುತ್ತಾ ಏಕಲವ್ಯ ಎಡಗೈಯಲ್ಲಿ ಬಾಣ ಬಿಡುವುದನ್ನು ಕಲಿಯುವುದನ್ನು ಹಾಡಿನ ಮೂಲಕ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಗುರುಕಾಣಿಕೆಯಾಗಿ 'ತನ್ನ ಬಲಗೈ ಹೆಬ್ಬೆರಳನ್ನು ನೀಡುವ ಮೂಲಕ ಏಕಲವ್ಯ ಗುರುವನ್ನು ಮೀರಿ ಎತ್ತರಕ್ಕೇರಿದರೆ, ಗುರುಕಾಣಿಕೆ ಪಡೆದ ದ್ರೋಣಾಚಾರ್ಯರು ಪಾತಾಳಕ್ಕಿಳಿದರು. ಏಕಲವ್ಯನ ನಿರ್ಭಿಡೆಯ ನಡೆಯಿಂದಾಗಿ ದ್ರೋಣರ ವ್ಯಕ್ತಿತ್ವ ಮಸುಕಾಯಿತು. ಸಿದ್ಧಲಿಂಗಯ್ಯ ಅವರ 'ಏಕಲವ್ಯ' ನಾಟಕದ ವೈಶಿಷ್ಟ್ಯವೆಂದರೆ ಬಲಗೈ ಹೆಬ್ಬೆರಳನ್ನು ಕೊಟ್ಟ ಏಕಲವ್ಯ ಎಡಗೈಯಿಂದ ಬಾಣ ಪ್ರಯೋಗಿವುದನ್ನು ಅಭ್ಯಾಸ ಮಾಡುವ ಮೂಲಕ ವಿದ್ಯೆಯನ್ನು ಯಾರು ಕಸಿದುಕೊಳ್ಳಲಾಗದು ಮತ್ತು ಅನ್ಯಾಯ, ಶೋಷಣೆಗೆ ಪ್ರತಿಯಾಗಿ ಸೆಟೆದು ನಿಲ್ಲುವ ಬಗೆಯನ್ನು ಸೂಚಿಸುತ್ತದೆ. ಪುರಾಣದ ಕತೆಯನ್ನು ಸಮಕಾಲೀನಗೊಳಿಸುವ ಸಲುವಾಗಿ ಅನೇಕ ಮಾರ್ಪಾಡುಗಳನ್ನು ಸೃಜನಶೀಲ ಬರಹಗಾರನಿಗೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ. ಸಿದ್ಧಲಿಂಗಯ್ಯ ಅವರು ಅದನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಆ ಕಾರಣಕ್ಕೆ 'ಏಕಲವ್ಯ' ಪ್ರಸಂಗವನ್ನಾಧರಿಸಿ ರಚಿತವಾದ ನಾಟಕಗಳಲ್ಲೇ ಇದಕ್ಕೆ ವಿಶಿಷ್ಟ ಸ್ಥಾನವಿದೆ.

ಎಂಟನೆಯ 'ದೃಶ್ಯ' ಕುರುಕ್ಷೇತ್ರ ಯುದ್ಧಕ್ಕಾಗಿ ಅಂಗಸಾಧನೆ ಮಾಡುತ್ತಿರುವ ಸೈನಿಕರ ಸಂಭಾಷಣೆಯೊಂದಿಗೆ ಆರಂಭವಾಗುತ್ತದೆ. 'ದಾಯಾದಿಗಳ ಕಿತ್ತಾಟಕ್ಕೆ ನಾವು ಯಾಕೆ ನಮ್ಮ ಪ್ರಾಣ ಕಳಕೋಬೇಕು? ಎಂದು ಪ್ರಶ್ನಿಸುವಷ್ಟು ಪ್ರಜ್ಞಾವಂತಿಕೆ ಸೈನಿಕರಿಗೆ ಬಂದಿದೆ. 'ಸ್ವರ್ಗದ ರಂಭೆ ಊರ್ವಶಿಯರಿಗಾಗಿ ನಮ್ಮ ಹೆಂಡತಿಯರು ಮುಂಡೇರಾಗಬೇಕೆ ಎಂದು ಒಬ್ಬ ಸೈನಿಕ ಪ್ರಶ್ನಿಸುತ್ತಾನೆ. ಸೈನಿಕನೊಬ್ಬನ ಪುಕ್ಕಲುತನವನ್ನು ವಿನೋದ, ವ್ಯಂಗ್ಯದ ಮೂಲಕ ಯುದ್ಧ ಸಾಮಾನ್ಯ ಜನರ ಮೇಲೆ ಉಂಟುಮಾಡುವ ಅನಾಹುತಗಳನ್ನು ಕಟ್ಟಿಕೊಡುವ ಗಂಭೀರ ಪ್ರಯತ್ನ ಇಲ್ಲಿದೆ.

ಒಂಬತ್ತನೆಯ 'ದೃಶ್ಯ'ದಲ್ಲಿ ದುರ್ಯೋಧನ ಮತ್ತು ಕರ್ಣರು ಕುರುಕ್ಷೇತ್ರದಲ್ಲಿ ಗೆಲುವು ಸಾಧಿಸುವ ತಂತ್ರಗಳ ಬಗ್ಗೆ ಚರ್ಚಿಸುತ್ತಿದ್ದಾರೆ. ಅರ್ಜುನನ ಮೇಲೆ ಅಗಾಧವಾದ ಸಿಟ್ಟಿರುವ ಏಕಲವ್ಯನನ್ನು ನಮ್ಮ ಪಕ್ಷಕ್ಕೆ ಸೇರಿಸಿಕೊಂಡರೆ ಪಾಂಡವರನ್ನು ಸುಲಭವಾಗಿ ಸೋಲಿಸಬಹುದೆಂದು ತರ್ಕಿಸಿ ದುರ್ಯೋಧನನು ಕರ್ಣನನ್ನು ಮುಂದಿಟ್ಟುಕೊಂಡು ಏಕಲವ್ಯನನ್ನು ತಮ್ಮ ಪಕ್ಷಕ್ಕೆ ಕರೆತರುವ ಬಗ್ಗೆ ತೀರ್ಮಾನಿಸುವುದನ್ನು ಕಾಣಬಹುದು.

ಹತ್ತನೆಯ 'ದೃಶ್ಯ' ಯುಧಿಷ್ಠಿರನು ಕೃಷ್ಣ, ಅರ್ಜುನ, ಭೀಮರೊಡನೆ ಕುರುಕ್ಷೇತ್ರ ಯುದ್ಧ ತಂದೊಡ್ಡುವ ಅಪಾಯಗಳನ್ನು ಕುರಿತು ಚರ್ಚಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ದಾಯಾದಿಗಳು ಮುಖಾಮುಖಿಯಾಗಿ ನಿಂತು ಹೋರಾಡುವ ಕುರುಕ್ಷೇತ್ರವನ್ನು ತಪ್ಪಿಸಬಹುದಿತ್ತು ಎಂದು ಯುಧಿಷ್ಠಿರ ಹೇಳಿದ್ದಕ್ಕೆ ದುರ್ಯೋಧನ ಮಾಡಿದ ಅಪಮಾನವನ್ನು ಮರೆಯಲು ಸಾಧ್ಯವೆ? ಎಂದು ಅರ್ಜುನ ಹೇಳುತ್ತಾನೆ. ನಮ್ಮನ್ನು ವನವಾಸಕ್ಕೆ ಅಟ್ಟಿ ನಿರ್ಗತಿಕರನ್ನಾಗಿ ಮಾಡಿದ್ದು, ದ್ರೌಪದಿಯ ವಸ್ತ್ರಾಪಹರಣ, ಅರಗಿನ ಮನೆಯಲ್ಲಿ ಸಜೀವ ದಹನಕ್ಕೆ ತಳ್ಳಿದ್ದನ್ನು ಹೇಗೆ ಮರೆಯಲು ಸಾಧ್ಯ ಎಂದು ಭೀಮ ಹೇಳುತ್ತಾನೆ. ಆಗ ಕೃಷ್ಣನು ಇದು ಧರ್ಮಾಧರ್ಮದ ಮುಖಾಮುಖಿ; ನ್ಯಾಯ-ಅನ್ಯಾಯದ ನೇರ ಸಂಘರ್ಷ. ಹೃದಯಹೀನನಾದ ದುರ್ಯೋಧನನಿಗೆ ಯಾವ ರಿಯಾಯಿತಿಯನ್ನು ತೋರಿಸುವುದು ಮನೋದೌರ್ಬಲ್ಯವಾಗುತ್ತದೆ ಎನ್ನುತ್ತಾನೆ. ಆಗ ಯುಧಿಷ್ಠಿರ ಇದು ಮಾನವೀಯ ಪ್ರಶ್ನೆಯೂ ಹೌದು ಎನ್ನುತ್ತಾನೆ. ಕೃಷ್ಣ ವಿನಾಶವಿಲ್ಲದೆ ಸೃಷ್ಟಿಯಿಲ್ಲ ಎನ್ನುತ್ತಾನೆ. ಕೊನೆಗೆ ಹೇಗಾದರೂ ಮಾಡಿ ಏಕಲವ್ಯನನ್ನು ಎರಡೂ ಪಕ್ಷಗಳಿಗೂ ಸೇರದಂತೆ ತಟಸ್ಥನಾಗಿರುವಂತೆ ಮನವೊಲಿಸಬೇಕೆಂದು ತೀರ್ಮಾನಿಸುತ್ತಾರೆ. ಅರ್ಜುನ ಕೃಷ್ಣರು ಏಕಲವ್ಯನನ್ನು ಸಂಧಿಸಲು ಹೊರಡುತ್ತಾರೆ.

ಹನ್ನೊಂದನೆಯ 'ದೃಶ್ಯ' ಅರ್ಜುನ-ಏಕಲವ್ಯ-ಕರ್ಣರ ಮುಖಾಮುಖಿ. ಅರ್ಜುನ ಮತ್ತು ಕರ್ಣರು ಏಕಲವ್ಯನನ್ನು ತಮ್ಮ ತಮ್ಮ ಪಾಳೆಯಕ್ಕೆ ಆಹ್ವಾನಿಸುವುದು ಈ ದೃಶ್ಯದ ವಸ್ತು. ಕೌರವ ಮತ್ತು ಪಾಂಡವರ ಹಿತಾಸಕ್ತಿಗಳು ನನಗೆ ಬೇರೆಯಾಗಿ ಕಾಣುತ್ತಿಲ್ಲ. ನನಗೆ ಎರಡೂ ಶಕ್ತಿಗಳೂ ಒಂದೇ. ಅವರವರ ಸ್ವಾರ್ಥಕ್ಕಾಗಿ ಅವರು ಬಡಿದಾಡುತ್ತಿದ್ದಾರೆ. ಇವರಿಬ್ಬರ ಕಚ್ಚಾಟದಲ್ಲಿ ನಾನೇಕೆ ಬಲಿಪಶುವಾಗಬೇಕು? ಎಂದು ಏಕಲವ್ಯ ಹೇಳುತ್ತಾನೆ. 'ಸಿದ್ಧಲಿಂಗಯ್ಯನವರ 'ಏಕಲವ್ಯ' ನಾಟಕವು ವಸ್ತುವಿನ್ಯಾಸ ಮತ್ತು ರಂಗಪ್ರಯೋಗದ ದೃಷ್ಟಿಯಿಂದ ವಿಶಿಷ್ಟವಾಗಿದೆ. ಪುರಾಣ ಕಥೆಯನ್ನು ಕಾಡು ಮತ್ತು ನಾಡಿನ ನಡುವಣ ಸಂಘರ್ಷದ ಕತೆಯಾಗಿ ಮರು ರೂಪಿಸಿರುವುದನ್ನು ಇಲ್ಲಿ ಕಾಣಬಹುದು.

## ವಸ್ತು ವಿಶ್ಲೇಷಣೆ

ಕನ್ನಡ ವಿಮರ್ಶೆ 'ಏಕಲವ್ಯ' ನ ಕತೆಯನ್ನು ಭಿನ್ನ ಆಯಾಮಗಳಲ್ಲಿ ವಿಶ್ಲೇಷಿಸಿರುವುದನ್ನು ಕಾಣಬಹುದು. ಏಕಲವ್ಯ ಪಾತ್ರದ ಮೂಲಕ ವಿವೇಚಿಸ ಹೊರಟವರು ಸಮಾಜದ ಕೆಳಸ್ತರದ ವ್ಯಕ್ತಿಯ ಸಾಹಸದ ಕಥೆಯೆಂದೂ, ದ್ರೋಣಾಚಾರ್ಯ ಪಾತ್ರದ ಮೂಲಕ ನಡೆದ ಚರ್ಚೆಗಳಲ್ಲಿ ಗುರುವಿನ ಅಸ್ತಿತ್ವವನ್ನೇ ಪ್ರಶ್ನಿಸಲಾಗಿದೆ. ಇನ್ನು 'ಕಲಿಕೆ'ಯನ್ನು ಕೇಂದ್ರವಾಗಿರಿಸಿಕೊಂಡು ನಡೆದ ವಿಶ್ಲೇಷಣೆಗಳಲ್ಲಿ "ಕಲಿಸುವುದಕ್ಕಿಂತ ಕಲಿಯುವುದೇ ಹೆಚ್ಚು ಮುಖ್ಯವೆಂದೂ ಹಾಗು ಗುರುವಿನ ಪರಿಣತಿಗಿಂತ ಶಿಷ್ಯನ ಕೇಂದ್ರೀಕರಣದ ಸಾಮರ್ಥ್ಯವೇ ಮಹತ್ವದ್ದು"[10] ಎಂದು ಅಭಿಪ್ರಾಯಪಟ್ಟಿದ್ದಾರೆ. ಏಕಲವ್ಯ ಪ್ರಸಂಗವನ್ನಾಧರಿಸಿದ ನಾಟಕಗಳು ಮತ್ತು ಆ ನಾಟಕಗಳನ್ನು ಕುರಿತ ಚರ್ಚೆಗಳನ್ನು ಒಟ್ಟಾಗಿ ಇರಿಸಿ ನೋಡಿದಾಗ ಮಹತ್ವದ ಒಳನೋಟಗಳು ತೆರೆದುಕೊಳ್ಳುತ್ತವೆ.

ಸಿದ್ಧಲಿಂಗಯ್ಯ ಅವರ 'ಏಕಲವ್ಯ' ನಾಟಕ ಸಮಕಾಲೀನವಾಗಿ ಪ್ರಸ್ತುತವೆನಿಸಿದೆ. ನಾಟಕದಲ್ಲಿನ ಎರಡು ಮಹತ್ವದ ತಿರುವುಗಳು ನಾಟಕದ ಸಮಕಾಲೀನತೆಗೆ

ಕಾರಣವಾಗಿರುವುದನ್ನು ಕಾಣಬಹುದು. ಒಂದು– ಏಕಲವ್ಯ ತನ್ನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ನೀಡಿದರೂ ಸಹ ತನ್ನ ಎಡಗೈಯಿಂದ ಬಿಲ್ವಿದ್ಯೆ ಕಲಿತು ಯಶಸ್ವಿಯಾದುದು. ಎರಡು– ಕುರುಕ್ಷೇತ್ರ ಯುದ್ಧದಲ್ಲಿ ಕುರು–ಪಾಂಡವರು ಯಾರೊಬ್ಬರ ಪಕ್ಷ ವಹಿಸದೆ ತಟಸ್ಥನಾಗಿ ಉಳಿಯುವುದು.

ಸೃಜನಶೀಲ ಲೇಖಕ ಸಮಕಾಲೀನ ಆಶಯಗಳನ್ನು ಚಿತ್ರಿಸುವ ಸಲುವಾಗಿ ಪುರಾಣ ಕಥೆಯನ್ನು ಭಿನ್ನವಾಗಿ ವ್ಯಾಖ್ಯಾನ ಮಾಡುತ್ತಾನೆ ಎಂಬುದಕ್ಕೆ ಏಕಲವ್ಯ ಪ್ರಸಂಗವೇ ಸಾಕ್ಷಿ. ಕನ್ನಡದಲ್ಲಿ ಇದುವರೆಗೆ ಪ್ರಕಟವಾಗಿರುವ ನಾಟಕಗಳಿಗಿಂತ ಸಿದ್ಧಲಿಂಗಯ್ಯನವರ 'ಏಕಲವ್ಯ' ನಾಟಕವು ಭಿನ್ನ ಆಯಾಮವನ್ನು ಪಡೆದುಕೊಳ್ಳುವುದು ಇಂತಹದ್ದೊಂದು ತಿರುವಿನಿಂದಲೇ ಎಂಬುದು ಮುಖ್ಯವಾಗಿದೆ. ತನ್ನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ನೀಡಿದ ಏಕಲವ್ಯ ತನ್ನ ಎಡಗೈಯಿಂದ ಬಿಲ್ವಿದ್ಯೆ ಕಲಿಯುವ ಪ್ರಸಂಗ ವಿಶಿಷ್ಟವಾದುದು. ಛಲ, ಸತತ ಪರಿಶ್ರಮದಿಂದ ಅಸಾಧ್ಯವಾದುದನ್ನು ಸಾಧಿಸಬಹುದು ಎಂಬುದಕ್ಕೆ ಏಕಲವ್ಯ ಪ್ರಸಂಗ ಸಾಕ್ಷಿಯಾಗಿದೆ. ಇಡೀ ಪ್ರಸಂಗ ಶಿಕ್ಷಣ ವ್ಯವಸ್ಥೆಯ ಮೇಲೆ ಮಹತ್ವದ ಬೆಳಕನ್ನು ಚೆಲ್ಲುತ್ತದೆ. ಅರ್ಜುನನಿಗೆ ಬಿಲ್ವಿದ್ಯೆ ಪ್ರತಿಷ್ಠೆಗಾಗಿ ಅಗತ್ಯವಾದರೆ ಏಕಲವ್ಯನಿಗೆ ಬಿಲ್ವಿದ್ಯೆ ಲೋಕೋದ್ಧಾರಕ್ಕಾಗಿ ಅಗತ್ಯವಾಗಿದೆ. ತಾನು ನಿಂತ ನೆಲ ಕಾಡು ಮತ್ತು ಅಲ್ಲಿನ ವೈವಿಧ್ಯಮಯತೆಯನ್ನು ರಕ್ಷಿಸಿಕೊಳ್ಳಲು ಬಿಲ್ವಿದ್ಯೆ ಅಗತ್ಯವಾಗಿದೆ. ತಳಸಮುದಾಯದವರು ವಿದ್ಯೆ ಕಲಿಯಲು ಇರುವ ಅನೇಕ ಅಡ್ಡಿ ಆತಂಕಗಳನ್ನು ನಾಟಕ ತೆರೆದಿಡುತ್ತದೆ. ಸಮಾನ ಶಿಕ್ಷಣಕ್ಕಾಗಿ ತಳಸಮುದಾಯದವರು ಮೇಲು ವರ್ಗದವರ ವಿರುದ್ಧ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ. ಶಿಕ್ಷಣ ವ್ಯವಸ್ಥೆ ಮೇಲುವರ್ಗದವರ ಮತ್ತು ಶ್ರೀಮಂತರ ಹಿಡಿತದಲ್ಲಿರುವುದನ್ನು ಏಕಲವ್ಯ ನಾಟಕ ವಿವರಿಸುತ್ತದೆ. ನಿರಂತರ ಹೋರಾಟದಿಂದ ಮಾತ್ರ ಶೈಕ್ಷಣಿಕ ಅಸಮಾನತೆಗಳನ್ನು ಹೋಗಲಾಡಿಸಲು ಸಾಧ್ಯ ಎಂಬ ಭರವಸೆಯನ್ನು ನಾಟಕದಲ್ಲಿ ಕಾಣಬಹುದು.

ಕುರುಕ್ಷೇತ್ರ ಯುದ್ಧದಲ್ಲಿ ಏಕಲವ್ಯನನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲೆಂದು ದುರ್ಯೋಧನನ ಪರವಾಗಿ ಕರ್ಣ ಮತ್ತು ಪಾಂಡವರ ಕಡೆಯಿಂದ ಅರ್ಜುನ ಆಹ್ವಾನಿಸಲೆಂದು ಬರುತ್ತಾನೆ. ಸೂತಪುತ್ರನೆಂದು ತಿರಸ್ಕೃತನಾದ ಕರ್ಣನ ಮೂಲಕ ಏಕಲವ್ಯನ ಮನವೊಲಿಸುವುದು ಸುಲಭ ಎಂದು ದುರ್ಯೋಧನ ಭಾವಿಸಿದ್ದಾನೆ. ಕರ್ಣನನ್ನು ತನ್ನ ಅವಕಾಶಕ್ಕಾಗಿ ದುರ್ಯೋಧನ ಬಳಸಿಕೊಂಡಿದ್ದಾನೆ. ಆದರೆ ಕರ್ಣ ಸುಯೋಧನನನ್ನು 'ಮಮತೆಯ ಜೀವ' ಎಂದು ನಂಬಿದ್ದಾನೆ. ಏಕಲವ್ಯನ ಬಳಿ ಬಂದ ಕರ್ಣ ಪಾಂಡವರ ಅಹಂಕಾರವನ್ನು ಎದುರಿಸುವುದೆಂದರೆ ಕೌರವ ಪಕ್ಷ ಸೇರಿಕೊಂಡು ಕುರುಕ್ಷೇತ್ರದಲ್ಲಿ ಹೋರಾಡುವುದೇ ಸೂಕ್ತ ಎನ್ನುತ್ತಾನೆ. ಅದಕ್ಕೆ ಏಕಲವ್ಯ 'ನೀನೀಗ ಸೂತಪುತ್ರನಲ್ಲ, ಅದನ್ನು ಮೀರಿ ಬೆಳೆದಿದ್ದೀಯ. ಈಗ ನೀನು ಅಂಗಾಧಿಪತಿ. ಆದರೆ ನಾನಿನ್ನೂ ಬೇಡ. ಅದಕ್ಕಾಗಿಯೇ ಕೌರವರು ಪಾಂಡವರ ಹಿತಾಸಕ್ತಿಗಳು ನನಗೆ ಬೇರೆಯಾಗಿ ಕಾಣುತ್ತಿಲ್ಲ. ಸುಯೋಧನ ನಿನ್ನನ್ನು ಒಪ್ಪಿಕೊಂಡಿದ್ದಾನೆ, ಇಡೀ ಸೂತ ಕುಲವನ್ನಲ್ಲ. ಸೂತ ಕುಲ ಹಿಂದೆ ಇದ್ದ ಸ್ಥಿತಿಯಲ್ಲಿಯೇ ಇದೆ. .ನನಗೆ ಎರಡೂ ಶಕ್ತಿಗಳೂ ಒಂದೇ ಅವರವರ ಸ್ವಾರ್ಥಕ್ಕಾಗಿ ಅವರು ಬಡಿದಾಡುತ್ತಿದ್ದಾರೆ. ಇವರಿಬ್ಬರ ಕಚ್ಚಾಟದಲ್ಲಿ ನಾವೇಕೆ ಬಲಿಪಶುವಾಗಬೇಕು?"[11] ಎಂದು ಪ್ರಶ್ನಿಸುತ್ತಾನೆ. ಪಾಂಡವರ ಪ್ರತಿನಿಧಿಯಾಗಿ ಆಗಮಿಸಿದ್ದ ಅರ್ಜುನನು ಸ್ವಶಕ್ತಿಯಿಂದ ವಿದ್ಯೆಯನ್ನು ಪಡೆದ ಏಕಲವ್ಯನನ್ನು ಪ್ರಶಂಸಿಸುತ್ತಾನೆ. ಹಿಂದೆ ನಡೆದುದೆಲ್ಲವನ್ನೂ ಮರೆತು ಸಹಾಯ ಮಾಡುವಂತೆ ಕೋರುತ್ತಾನೆ. ಅದಕ್ಕೆ ಏಕಲವ್ಯನು "ನಾನು ಬಿಲ್ಲು ವಿದ್ಯೆ ಕಲಿಯುವುದನ್ನೇ ನೀವು ವಿರೋಧಿಸಿದೆ. ನಾನು ಕಲಿತ ನಂತರ ಅಸಹನೆಯಿಂದ ಅದನ್ನು ಇಲ್ಲವಾಗಿಸಲು ಯತ್ನಿಸಿದೆ. ಎಲ್ಲಾ ಬೇಡರೂ ಗುರುಮುಖದಿಂದ ವಿದ್ಯೆ ಕಲಿತು ಶ್ರೇಷ್ಠ ಬಿಲ್ಲುಗಾರರಾಗುವ ವಿಚಾರ ಸಾಮಾನ್ಯ ಸಂಗತಿಯಾಗಬೇಕು" [12] ಎನ್ನುತ್ತಾನೆ. ದುರ್ಯೋಧನ ಕುಲಮದವನ್ನು ಅಳಿಸಿಹಾಕುವುದೇ ನಿನ್ನ ಗುರಿಯಾದರೆ ನಮ್ಮನ್ನು ಬೆಂಬಲಿಸು ಎಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಏಕಲವ್ಯನು "ಕುರು ಪಾಂಡವರಲ್ಲಿ ಒಂದು ಪಕ್ಷ ವಹಿಸಿ ಯಾರೊಬ್ಬರ ದಾಳ ನಾನಾಗಲಾರೆ. ಎಲ್ಲೆಲ್ಲೂ ಇರುವ ಅನ್ಯಾಯದ ವಿರುದ್ಧ ಜ್ಞಾನದ ಗುತ್ತಿಗೆಯನ್ನು ಹಿಡಿಯುವ ಶಾಸ್ತ್ರಗಳ ವಿರುದ್ಧ ನನ್ನ ಯುದ್ಧ. ಮೇಲು ಕೀಳೆಂಬ ವಂಚನೆಯನ್ನು ಅಳಿಸಲು ನನ್ನ ಸಮರ. ಕುರುಕ್ಷೇತ್ರ ಕೇವಲ ಉಳ್ಳವರ ನಡುವಿನ ಕಚ್ಚಾಟ. ನನ್ನದು ಇಲ್ಲದವರ ಪರವಾದ ಹೋರಾಟ. ಈ ಸಂಘರ್ಷ ಕುರು ಪಾಂಡವರಿಬ್ಬರ ವಿರುದ್ಧವೂ ಸಾಗಬೇಕು. ಆಗ ಮಾತ್ರ ತುಳಿತಕ್ಕೆ ಸಿಕ್ಕಿದವರ ಬಾಳಿನಲ್ಲಿ ಬೆಳಕು ಮೂಡುತ್ತದೆ. ಕಡೆಗಣಿಸಲ್ಪಟ್ಟವರ ಬದುಕಿನ ತೋಟದಲ್ಲಿ ಸಮಾನತೆಯ ಹೂ ಅರಳುತ್ತದೆ"[13] ಎನ್ನುತ್ತಾನೆ.

ಕನ್ನಡ ದಲಿತ ಚಳವಳಿ ಮತ್ತು ದಲಿತ ಸಾಹಿತ್ಯ ಎರಡೂ ಒಟ್ಟೊಟ್ಟಿಗೆ ಬೆಳೆದು ಬಂದಿರುವುದು ತಿಳಿದ ಸಂಗತಿ. ಸಿದ್ಧಲಿಂಗಯ್ಯನವರ ಕಾವ್ಯ ದಲಿತ ಸಾಹಿತ್ಯದ ಪ್ರಣಾಳಿಕೆಯಂತೆ ಜನಪ್ರಿಯವಾಯಿತು. ಅಂಬೇಡ್ಕರ್, ಗಾಂಧಿ ಮತ್ತು ಮಾರ್ಕ್ಸ್ ವಿಚಾರಧಾರೆಗಳಿಂದ ಸಿದ್ಧಲಿಂಗಯ್ಯ ಪ್ರಭಾವಿತರಾದವರು. ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಅಸಮಾನತೆಗಳನ್ನು ತಮ್ಮ ಬರಹದಲ್ಲಿ ಪ್ರಶ್ನಿಸಿದ್ದಾರೆ. ಚರಿತ್ರೆ ಮತ್ತು ಪುರಾಣಗಳನ್ನು ಪ್ರತಿಷ್ಠಿತ ವರ್ಗದ ಹಿತಾಸಕ್ತಿಗೆ ಬದಲಾಗಿ ಮಾನವೀಯ ಮತ್ತು ಸಾಮಾಜಿಕ ನ್ಯಾಯದ ಪರಿಭಾಷೆಯಲ್ಲಿ ಮರುರೂಪಿಸಿರುವುದನ್ನು ಕಾಣಬಹುದು. ಆಧುನಿಕ ಶಿಕ್ಷಣ ವ್ಯವಸ್ಥೆ ಪ್ರತಿಷ್ಠಿತ ವರ್ಗದವರ ಸೊತ್ತಾಗಿದ್ದು, ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸುವ ಆಶಯ ಇಲ್ಲಿದೆ. ಜೊತೆಗೆ ಪ್ರತಿಷ್ಠಿತರ ನಡುವೆ ಸ್ವಾರ್ಥಕ್ಕಾಗಿ ಸೆಣಸುವ ಪ್ರತಿಷ್ಠಿತರಲ್ಲಿ ತಳಸಮುದಾಯದವರು ಯಾರೊಬ್ಬರ ಪಕ್ಷವನ್ನು ಸೇರದೆ, ಆ ಎರಡು ಗುಂಪುಗಳ ವಿರುದ್ಧದ ಹೋರಾಟ ನಿರಂತರವಾಗಿರಬೇಕೆಂಬ ಅಪೇಕ್ಷೆಯನ್ನು ನಾಟಕದಲ್ಲಿ ಕಾಣಬಹುದು.

ಪ್ರಸ್ತುತ ಏಕಲವ್ಯ ನಾಟಕದಲ್ಲಿ ಮಾನವ ತನ್ನ ದುರಾಸೆಯಿಂದ ಪ್ರಕೃತಿಯನ್ನು ನಾಶಮಾಡ ಹೊರಟಿರುವುದನ್ನು ತೀವ್ರವಾಗಿ ಖಂಡಿಸಲಾಗಿದೆ. ಸ್ವಾರ್ಥಸಾಧನೆಗಾಗಿ ಹಪಹಪಿಸುತ್ತಿರುವ ನಾಗರಿಕ ಸಮಾಜವನ್ನು ವಿಡಂಬಿಸಲಾಗಿದೆ. ಕಾಡಿನ ಮಕ್ಕಳೇ ಕಾಡನ್ನು ಸಂರಕ್ಷಿಸಲು ಬದ್ಧರಾಗಿದ್ದಾರೆ. ಕಾಡು ಮತ್ತು

ಕಾಡಿನ ಜನರ ಹಿತಕ್ಕಾಗಿ ಏಕಲವ್ಯನಿಗೆ ಹೆಚ್ಚಿನ ವಿದ್ಯೆಯ ಅವಶ್ಯಕತೆಯಿದೆ. ವಿದ್ಯೆಯ ಪರಿಕಲ್ಪನೆಯನ್ನು ನಾಟಕದಲ್ಲಿ ಮರುಪರಿಶೀಲಿಸಲಾಗಿದೆ ವಿದ್ಯಾರ್ಥಿಕೇಂದ್ರಿತ ನೆಲೆಯಲ್ಲಿ ಕಲಿಕೆಯನ್ನು ವ್ಯಾಖ್ಯಾನಿಸುವ ಪರಿಯಂತು ನವೀನವಾಗಿದೆ. ಸಿದ್ದಲಿಂಗಯ್ಯ ಅವರ ಏಕಲವ್ಯ ನಾಟಕ ಸಮಕಾಲೀನವಾಗಿ ತುಂಬಾ ಮಹತ್ವವನ್ನು ಪಡೆಯಲು ಮುಖ್ಯ ಕಾರಣ 'ವಿದ್ಯೆ'ಯನ್ನು ಕುರಿತ ನಿಲುವಿನಿಂದಾಗಿ. ಗುರುವನ್ನು ಮೀರಿಸಿ ಎತ್ತರಕ್ಕೇರಿದ ಏಕಲವ್ಯ ಶೈಕ್ಷಣಿಕ ಅಸಮಾನತೆಯ ವಿರುದ್ದ ಪ್ರತಿಭಟಿಸುತ್ತಾನೆ. ಗುರುವಿನ ಬಗ್ಗೆ ಅಪಾರ ಭಕ್ತಿಯನ್ನು ಇರಿಸಿಕೊಂಡು, ಸಂಕಷ್ಟವನ್ನೆದುರಿಸುತ್ತಿದ್ದ ಗುರುವನ್ನು ಗುರುದಕ್ಷಿಣೆ ನೀಡುವ ಮೂಲಕ ಪಾರುಮಾಡುತ್ತಾನೆ. ಕಲಿತ ವಿದ್ಯೆಯನ್ನು ಕಸಿದುಕೊಂಡ ವ್ಯವಸ್ಥೆಗೆ ಎಡಗೈಯಿಂದ ಬಿಲ್ವಿದ್ಯೆ ಕಲಿತು ಪಾರಂಗತನಾಗುವ ಮೂಲಕ ತಕ್ಕ ಉತ್ತರ ಕೊಡುತ್ತಾನೆ. ಆಧುನಿಕ ಶಿಕ್ಷಣ ವ್ಯವಸ್ಥೆ ಪ್ರತಿಷ್ಠಿತ ವರ್ಗದ ಹಿಡಿತದಲ್ಲಿದೆ. ಜಾತಿ, ಹಣ ಬಲವುಳ್ಳವನು ಯಾವ ಅರ್ಹತೆ ಇಲ್ಲದೆಯೂ ಶಿಕ್ಷಣ ಪಡೆಯಬಹುದು. ದಮನಿತ ಸಮುದಾಯದವರಿಗೆ ವಿದ್ಯೆ ಕಲಿಯಲು ನಿರಾಕರಿಸುವ, ಕಲಿತ ವಿದ್ಯೆಯನ್ನು ಕಸಿದುಕೊಳ್ಳುವ, ಅವಕಾಶಗಳಿಂದ ವಂಚಿಸುತ್ತಿರುವ ಹುನ್ನಾರಗಳನ್ನು ಅರಿಯಬೇಕಾಗಿದೆ. ಜೊತೆಗೆ ಅದನ್ನು ಪ್ರತಿಭಟಿಸಬೇಕು ಎಂಬುದನ್ನು ನಾಟಕ ದರ್ಶಿಸುತ್ತದೆ. ಏಕಲವ್ಯ ಪ್ರತಿಭಟನೆಯ ಭಿನ್ನ ದಾರಿಯನ್ನು ಕಂಡುಕೊಳ್ಳುತ್ತಾನೆ. ಗುರುಪರಂಪರೆಯನ್ನು ಗೌರವಿಸಿಯೂ, ತನ್ನ ಛಲ, ಶ್ರದ್ಧೆಯಿಂದ ಅಭ್ಯಾಸಮಾಡಿ ಪಾರಂಗತನಾಗುತ್ತಾನೆ. ಆ ಮೂಲಕ ನಾಟಕಕಾರ ಭವಿಷ್ಯದ ಬಗೆಗಿನ ಭರವಸೆಯನ್ನು ಹುಟ್ಟುಹಾಕುತ್ತಾರೆ.

**ಕೊನೆ ಟಿಪ್ಪಣಿಗಳು**

1. ಸಿದ್ದಲಿಂಗಯ್ಯ (2015) ಏಕಲವ್ಯ, ಅಂಕಿತ ಪುಸ್ತಕ, ಬೆಂಗಳೂರು, ಪುಟ.17
2. ಅದೇ ಪುಟ.23, 24
3. ಅದೇ ಪುಟ.26
4. ಅದೇ ಪುಟ.27
5. ಅದೇ ಪುಟ.33
6. ಅದೇ ಪುಟ.34
7. ಅದೇ ಪುಟ.35
8. ಅದೇ ಪುಟ.43
9. ಅದೇ ಪುಟ.46
10. ಅಕ್ಷರ ಕೆ.ವಿ (2011), ಅಂತಃಪಠ್ಯ ಮತ್ತು ಇತರ ಪ್ರಬಂಧಗಳು, ಪುಟ.154
11. ಪೂರ್ವೋಕ್ತ ಪುಟ.58
12. ಅದೇ ಪುಟ.59
13. ಅದೇ ಪುಟ.60

**ಪರಾಮರ್ಶನ**


1. ಅಕ್ಷರ ಕೆ.ವಿ (2011), ಅಂತಃಪಠ್ಯ ಮತ್ತು ಇತರ ಪ್ರಬಂಧಗಳು,ಅಕ್ಷರ ಪ್ರಕಾಶನ, ಹೆಗ್ಗೋಡು
2. ಕುಮಾರಚಲ್ಯ (2005), ಕಾಲಮಾನ, ಸಂವಹನ, ಮೈಸೂರು
3. ನಂದೀಶ್ ಹಂಚೆ (ಸಂ) 2013, ಎಚ್.ಎಮ್.ಚನ್ನಯ್ಯ ಸಮಗ್ರ ಸಾಹಿತ್ಯ ಸಂಪುಟ-2 ವಿಮರ್ಶೆ, ಸಂವಹನ, ಮೈಸೂರು
4. ಮರುಳಸಿದ್ದಪ್ಪ ಕೆ, (2013), ಆಧುನಿಕ ಕನ್ನಡ ನಾಟಕ, ಅಂಕಿತ ಪುಸ್ತಕ, ಬೆಂಗಳೂರು.